ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಿಗೆ, ತಾಲ್ಲೂಕು ಒಂದಕ್ಕೆ ಐದು ಜನ ಮೆಂಬರುಗಳ ಪ್ರಕಾರ.

ಮೈಸೂರು, ಬೆಂಗಳೂರು ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರವೂ, ಮೈಸೂರು ಮತ್ತು ಬೆಂಗಳೂರು ಪಟ್ಣಗಳಿಗಾಗಿ 4 ಜನ ಮೆಂಬರುಗಳು.

ಇತರ ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರ.

ಈ ಮೇರೆ ಸಭೆಗೆ ಒರತಕ್ಕ ಮೆಂಬರುಗಳ ಸಂಖೆ 285ಕ್ಕೆ ಮೀರುವದಿಲ್ಲ.

IX. ಸಭೆಯು ಕೇರುವದಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ಮೇಲ್ಕಂಡ ಮೇರೆ ಮೆಂಬರುಗಳನ್ನು ಚುನಾಯಿಸಿ ಆ ರೀತಿ ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರುಗಳನ್ನು ಒಂದು ಪಟ್ಟಿಯಲ್ಲಿ ಬರೆದು ಎಲ್ಲರ ತಿಳುವಳಿಕೇ ಬಗ್ಯೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಯ ಬಹಿರಂಗವಾದ ಸ್ಥಳದಲ್ಲಿ ಸದರೀ ಪಟ್ಟಿಯನ್ನು ಅಂಟಿಸತಕ್ಕದ್ದು. ಚುನಾಯಿಸಿದ ಕೂಡ್ಲೆಯೇ ಆಯಾಯ ಮೆಂಬರುಗಳಿಗೆ ತಿಳಿಸತಕ್ಕದ್ದು.

ತಾರೀಖು 16ನೇ ಸೆಪ್ಟಂಬರ್ 1887.

ನಂ. 116.—ಮೆ|| ಟಿ. ಆನಂದರಾವ್ ಬಿ. ಎ. ಯವರು ಮೈಸೂರು ಡಿಸ್ಟ್ರಿಕ್ಟು ವ ಖಜಾನೆ ಚಾರ್ಜನ್ನ ವೊಪ್ಪಿಸಿ, ಮೆ|| ಅಬ್ದುಲ್ ರಹಿಮಾನ್‌ಯವರು, ಮಾಹೆ ಮಜಕೂರು ತಾರೀಖು 10ನೇ ಪ್ರಾತಃಕಾಲ ವಹಿಸಿರುತ್ತಾರೆ.

ಕ್ಯಾಂಪ್ ನಂ. 1273.—ಬೌರಿಂಗ್ ಪೇಟೆ ತಾಲ್ಲೂಕು ಅಮಲ್‌ದಾರ್ ಶ್ರೀನಿವಾಸರಾಯರಿಗೆ 1887ನೇ ಇಸವಿ ಸೆಪ್ಟಂಬರ್ 7ನೇ ಮರ್ಕುಮಿನ 1108ನೇ ನಂಬರ್‌ವುಳ್ಳ ದಿರ್ವಾರವರ ಇಸ್ತಿಹಾರಿನಿಂದ ಮಂಜೂರಾದ ವೊಂದು ತಿಂಗಳ ಪ್ರಿವಿಲೀಜ್ ರಜಾವನ್ನ ಅವರು 1887ನೇ ಇಸವಿ ಆಗಸ್ಟು 21ನೇ ತಾರೀಖು ಲಾಗಾಯಿತು ವುಪಯೋಗಿಸಿಕೊಂಡಿರುತ್ತಾರಾಗಿ ಈ ರಜಾ 1887ನೇ ಅಕ್ಟೋಬರ್ 2ನೇ ತಾರೀಖು ವರಿವಿಗೂ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 20ನೇ ಸೆಪ್ಟಂಬರ್ 1887.

ನಂ. 118.—ಹುಣಸೂರು ತಾಲ್ಲೂಕು ಅಮಲ್‌ದಾರ್ ಟಿ. ಯನ್. ಕಮಾಲುದ್ದೀನ್ ಅಲ್ಲೀಖಾನ್‌ಯವರಿಗೆ 1887ನೇ ಇಸವಿ ಮಾರ್ಚೀ 10ನೇ ಮರ್ಕುಂ 1782ನೇ ನಂಬರ್‌ವುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ ಯರಡು ತಿಂಗಳ ಪ್ರಿವಿಲೀಜ್ ರಜಾವನ್ನ 1887ನೇ ಜುಲೈ 8ರ ಲಾಗಾಯಿತು ವುಪಯೋಗಿಸಿ ಕೊಂಡು, ಆಗಸ್ಟು 27ರಲ್ಲು ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ಉಪಯೋಗಿಸಿಕೊಳ್ಳದ 11 ದಿವಸ ರಜಾವನ್ನ ರದ್ದು ಪಡಿಸಿಯಿಧೆ.

ತಾರೀಖು 21ನೇ ಸೆಪ್ಟಂಬರ್ 1887.

ನಂ. 120.—ಮಾಹೆ ಮಜಕೂರು 5ನೇ ಮರ್ಕುಂ 105ನೇ ನಂಬರ್ ಇಸ್ತಿಹಾರನ್ನನುಸರಿಸಿ, ಈ ಕೆಳಗೆ ನಮೂದಾಗುವ ಗ್ರಾಮ ಮತ್ತೊಂದು ಗ್ರಾಮಕ್ಕೆ ದಾಖಲಾಗುವಂತೆ ಅಪ್ಪಣೆ ಮಾಡಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಯಾವ ಗ್ರಾಮಕ್ಕೆ ಸೇರತಕ್ಕದ್ದು.
ಬಾಗೇಪಲ್ಲಿ	ನಂಬಿಕುಂಟೆದಿನ್ನೆ	ಪಾಸಲಪರತಿ

ಬಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸನ್ 1887ನೇ ಇಸವಿ ಸೆಪ್ಟಂಬರ್ ತಾರೀಖು 13.

ಕನ್ನಡ ಭಾಷೆಗಾಗಿ ಚಿನ್ನದ ಬಿರುದು ಬಿಲ್ಲೆ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಚಿಕ್ಕ ಪೇಟೆಯಲ್ಲಿರುವ ಮೆ|| ರಾ|| ಪಾಲಮಂಡರಾಮರಾವ್ ಎಂಬವರಿಂದ, ಸನ್ 1888ನೇ ಇಸವಿಯಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ 20 ರೂಪಾಯಿ ಬೆಲೆಯುಳ್ಳ ಒಂದು ಚಿನ್ನದ ಬಿರುದುಬಿಲ್ಲೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಡ್ಯುಕೇಷನ್ ಸೆಕ್ರಿಟೇರಿ.